ತಾರೀಖು 13ನೆ ಫೆಬ್ರವರಿ 1907.

ನಂ. ರೆ. 7493—ಫಾರೆಸ್ಟ್ 24-06—10. ಈ ಇಸ್ತಿಹಾರ್ನಾಮೆಯ ಮೂಲಕ ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಗಂಧದ ಮರಗಳಿಗೆ ಬರುವ ಸ್ಪೈಕ್ ರೋಗದ ಕಾರಣವನ್ನು ಕಂಡು ಹಿಡಿದು ಅದನ್ನು ಸಮೂಲವಾಗಿ ನಾಶಮಾಡುವುದಕ್ಕೆ ಪ್ರಬಲವಾಗಿಯೂ, ಕಾರ್ಯಕಾರಿಯಾಗಿಯೂ, ಅಗ್ಗವಾಗಿಯೂ, ಸುಲಭವಾಗಿ ಪ್ರಯೋಗಿಸತಕ್ಕದ್ದಾಗಿಯೂ ಇರುವ ಔಷಧವನ್ನು ತಿಳಿಸುವವರಿಗೆ ಮೈಸೂರು ಶ್ರೀಮಂ ಮಹಾರಾಜರವರ ಸರ್ಕಾರದವರು ಹತ್ತು ಸಾವಿರ ರೂಪಾಯಿಗಳ ಬಹುಮಾನವನ್ನು ಕೊಡಲು ಸಿದ್ಧವಾಗಿರುತ್ತಾರೆ. ಈ ಬಹುಮಾನವು ಈ ಇಸ್ತಿಹಾರ್ನಾಮೆಯ ತಾರೀಖಿನಿಂದ ಮೂರು ವರ್ಷಗಳೊಳಗೆ ಯಾವಾಗಲಾದರೂ ಪಡೆಯತಕ್ಕದ್ದಾಗಿರುತ್ತದೆ.

2. ಮೇಲೆ ಕಂಡ ಬಹುಮಾನವನ್ನು ಅಪೇಕ್ಷಿಸುವ ಪ್ರತಿಯೊಬ್ಬರೂ ತಾವು ಶೋಧನೆ ಮಾಡಿದುದರ ರಿಪೋರ್ಟನ್ನು, ಸೂಕ್ಷ್ಮದರ್ಶಿಯಲ್ಲಿ ಪರೀಕ್ಷಿಸುವುದಕ್ಕಾಗಿ ಪದಾರ್ಥಗಳ ಚಿತ್ರಗಳಿರುವ ಕನಡಿಗಳು, ನಕ್ಷೆಗಳು, ಮೊದಲಾದುವುಗಳೊಡನೆ, ಮೈಸೂರು ಶ್ರೀಮಂ ಮಹಾರಾಜರವರ ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೆರಿಯಟಿಗೆ ಕಳುಹಿಸಬೇಕು. ಈ ಬಹುಮಾನ ಪಡೆಯುವುದಕ್ಕೆ ತರುವ ಯಾವ ಬಿನ್ನಹವನ್ನೂ ಅಂಗೀಕರಿಸುವುದಕ್ಕೂ ಮೊದಲು ಈ ಕೆಳಗಿನ ಷರತ್ತುಗಳನ್ನು ನೆರವೇರಿಸಬೇಕು :—

(1) ರೋಗದ ಕಾರಣವನ್ನು ನಿರ್ಣಯವಾಗಿಯೂ ಸ್ಪಷ್ಟವಾಗಿಯೂ ಗೊತ್ತುಮಾಡಿರಬೇಕು.

(2) ಕಾರ್ಯಕಾರಿಯಾಗಿಯೂ, ಅಗ್ಗವಾಗಿಯೂ, ಸುಲಭವಾಗಿ ಪ್ರಯೋಗಿಸತಕ್ಕದ್ದಾಗಿಯೂ ಇರುವ ಬಂದು ಔಷಧವನ್ನು ಹೇಳಿರಬೇಕು.

(3) ಆ ಔಷಧವು, ರೋಗ ಹರಡಿಕೊಳ್ಳುವುದನ್ನು ಬಂದು ವರ್ಷದೊಳಗಾಗಿ ಕಂಡಹಾಗೆ ನಿಲ್ಲಿಸುವಂಥಾದ್ದಾಗಿರಬೇಕು. ಎಲ್ಲಾ ಬಿನ್ನಹಗಳನ್ನೂ, ಸರ್ಕಾರದವರು ನೇಮಿಸುವ ಜಂಗಲಿ ಅಧಿಕಾರಿಗಳೂ ಸೇರಿ ಈ ವಿಷಯವನ್ನು ವಿಕೇಷವಾಗಿ ಪರಿಶೋಧಿಸಿರುವ ಮೂವರು ಪಂಡಿತರಿಗೆ ಕಡಮೆಯಿಲ್ಲದ ಒಂದು ಸಭೆಗೆ, ತೀರ್ಪಿನ ಬಗ್ಗೆ ಬಿಚ್ಚಿಸಲಾಗುವುದು; ಆ ಸಭೆಯ ಅಥವಾ ಅಲ್ಲಿನವರ ಪೈಕಿ ಹೆಚ್ಚು ಸಂಖ್ಯೆಯವರ ತೀರ್ಪೇ ಕಡೆಯದಾಗಿರುವುದು.

3. ಈ ವಿಷಯವನ್ನು ಶೋಧನೆ ಮಾಡಲು ಇಷ್ಟಪಟ್ಟವರು, ಸ್ಪೈಕ್ ರೋಗವನ್ನು ನಿರ್ಮೂಲಮಾಡುವ ವಿಷಯವನ್ನು ಕುರಿತ, ಮುಖ್ಯವಾದ ಮತ್ತು ಉಪಯೋಗವಾದ ಕಾಗದ ಪತ್ರಗಳನ್ನು ಸಂಗ್ರಹಿಸಿ ಒಟ್ಟಾಗಿ ಅಚ್ಚು ಹಾಕಿರುವ ಪುಸ್ತಕದ ಪ್ರತಿಗಳನ್ನು ಮೈಸೂರು ಜಂಗಲಿ ಕಾರ್ಯದರ್ಶಿಯವರಿಂದ ಪಡೆಯಬಹುದು.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ಬೆಂಗಳೂರು, ತಾರೀಖು 22ನೆ ಫೆಬ್ರವರಿ 1907ನೆ ಇಸವಿ.

ನಂ. 165-1343, ಹಾಸನ ಡಿವಿಜಿಗೆ ಸೇರಿದ ಅಸಿಸ್ಟೆಂಟ್ ಇಂಜನಿಯರ್ ಮಿ|| ವೆಂಕಟರಾವ್ ನಿಜಗಲ್, ಎಲ್. ಸಿ. ಇ., ಯವರಿಗೆ 1906ನೆ ಇಸವಿ ನವಂಬರು 30ನೆ ತಾರೀಖಿನ 1199-3074ನೆ ನಂಬರು ಇಸ್ತಿಹಾರ್ನಾಮೆಯಲ್ಲಿ ಮಂಜೂರ್ಮಾಡಲ್ಪಟ್ಟ 2 ತಿಂಗಳು ಪ್ರಿವಿಲೇಜ್ ರಜೆಯನ್ನು ಇನ್ನೊಂದು ತಿಂಗಳು ಬಡ್ತಾವಣೆ ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕ್‌ಹರ್ಜೀ,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನಮೆಂಟ್ ಸೆಕ್ರಿಟರಿ.

ಮಿಲಿಟರಿ.

ಇಸ್ತಿಹಾರ್ನಾಮೆ.

ತಾರೀಖು 20—21ನೆ ಫೆಬ್ರವರಿ 1907.

ನಂ. 3135-7, ಮೈಸೂರು ಸೀಮೆಯ ಸೈನವನ್ನೆಲ್ಲಾದಿಪ ಶ್ರೀಮಂ ಮಹಾರಾಜರವರು ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ 1906ನೆ ಇಸವಿ ಡಿಸೆಂಬರ್ 13ನೆ ತಾರೀಖು ಲಾಗಾಯಿತು ಇದರಡೀ ಕಂಡ ಮೊಕರೂಜಾತಿಯನ್ನು ಮಂಜೂರ್ಮಾಡಿರುತ್ತಾರೆ.

ಹೆಸರು.	ಮೊಕರೂರು ಆದ ಹುದ್ದೆ.
ಕೋಟ್ ದಫೇದಾರ್, ಫೈಯಾಜ್ ಮಹಮದ್‌ಖಾ ...	ಜವಾದಾರ್, 4ನೆ ಗ್ರೇಡ್.

ತಾರೀಖು 21—22ನೆ ಫೆಬ್ರವರಿ 1907.

ನಂ. 3178—80, ಮೈಸೂರು ಸೀಮೆಯ ಸೈನವನ್ನೆಲ್ಲಾದಿಪ ಶ್ರೀಮಂ ಮಹಾರಾಜರವರು ಮೈಸೂರು 1ನೆ ಫೈದಲ್ ಪಟಾಲಮಿನಲ್ಲಿ 1907ನೆ ಇಸವಿ ಫೆಬ್ರವರಿ 12ನೆ ತಾರೀಖು ಲಾಗಾಯಿತು ಇದರಡೀ ಕಂಡ ಬಡ್ತಿಯನ್ನು ಮಂಜೂರ್ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.
ಕೃಷ್ಣ ಸಿಂಗ್ ...	ಹವಿಲ್ದಾರ್ ಮೇಜರ್ ...	ಜವಾದಾರ್ 2ನೆ ಗ್ರೇಡ್

ಹುಕುಂ ಬಮೋಜೀಬ್,
ಆರ್. ಜಿ. ಜೋನ್ಸ್, ಲೆಫ್ಟನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.